**ಪಾಠ–13** **ಜೂನ್ 23–29**

# ನಮ್ಮ ಕರ್ತನಾದ ಯೇಸುವಿನ ಬರೋಣವು

**ಸಬ್ಬತ್ತಿನ ಮಧ್ಯಾನ್ಹ**

**ಈ ವಾರದ ಅಧ್ಯಯನಕ್ಕಾಗಿ :** ಯೆಶಾಯ 13:6,9; ಮತ್ತಾಯ 24:30,31; ದಾನಿಯೇಲ 2:34, 35; 2 ತಿಮೋಥಿ 4:6–8; 2 ಥೆಸಲೋನಿಕ 1:7–10.

***ಸ್ಮರಣ ವಾಕ್ಯ :*** **ಹೇಗೆ ಮಿಂಚು ಮೂಡಣದಲ್ಲಿ ಹುಟ್ಟಿ ಪಡುವಣದವರೆಗೂ ಕಾನಿಸುತ್ತದೋ ಹಾಗೆಯೇ ಮನುಷ್ಯಕುಮಾರನು ಪ್ರತ್ಯಕ್ಷತೆಯು ಇರುವದು. (ಮತ್ತಾಯ 24:27)**

ಕವಿಯಾದ ಟಿ ಎಸ್. ಎಲಿಯೋಟ್ ತಮ್ಮ ಕವನದ ಸಾಲನ್ನು ಹೀಗೆ ಆರಂಭಿಸುತ್ತಾರೆ: ನನ್ನ ಆರಂಭದಲ್ಲಿಯೇ ನನ್ನ ಅಂತ್ಯವಿದೆ. ಆತನ ಮಾತುಗಳು ಎಷ್ಟು ಸಂಕ್ಷಿಪ್ತವಾಗಿದ್ದರೂ ಕೂಡ ಅವುಗಳಲ್ಲಿ ಪ್ರಭಲವಾದ ಸತ್ಯವಿದೆ. ಉಗಮದಲ್ಲಿಯೇ ಅಂತ್ಯವಿದೆ. ಈ ಸತ್ಯದ ಮಹತ್ವವನ್ನು ನಮ್ಮ ಸಭೆಯ ಹೆಸರಿನಲ್ಲಿ ನಾವು ನೋಡಬಹುದು, ಸೇವೆಂತ್ ಡೇ ಅಡ್ವೆಂಟಿಸ್ಟ್, ಇದರಲ್ಲಿ ಎರಡೂ ಮೂಲ ಸತ್ಯವೇದ ಭೋಧನೆಗಳು ಅಡಗಿವೆ:ಏಳನೇಯ ದಿನ ಸಬ್ಬತ್ತಿನ ಆಜ್ಞೆಯನ್ನು ತೋರಿಸುತ್ತದೆ, ಆರು ದಿನಗಳ ಸೃಷ್ಟಿಗೆ ಸಾಕ್ಷಿಯಾಗಿ ಇದು ನಿಂತಿದೆ ಮತ್ತು ಅಡ್ವೆಂಟಿಸ್ಟ್ ಕ್ರಿಸ್ತನ ಎರಡನೇಯ ಬರೋಣಕ್ಕೆ ನಮ್ಮನ್ನು ಕರೆದೊಯ್ಯುತ್ತದೆ. ಇದರಲ್ಲಿ ನಮ್ಮ ಎಲ್ಲಾ ನಿರೀಕ್ಷೆಗಳು ಮತ್ತು ಸತ್ಯವೇದದ ವಾಗ್ದಾನಗಳು ಅಡಗಿವೆ, ಇದರಲ್ಲಿ ನಿತ್ಯಜೀವದ ಅಂತಿಮ ನೆರವೇರಿಕೆಯನ್ನು ನೋಡುತ್ತೇವೆ.

ಆದರೂ ಕೂಡ ಲೋಕವು ಆರಂಭವಾದ ಸಮಯವು (ನಮ್ಮ ಆರಂಭ) ಕ್ರಿಸ್ತನ ಬರೋಣದಿಂದ ಆರಂಭವಾಗುತ್ತದೆ (ನಮ್ಮ ಅಂತ್ಯ, ಈ ಲೋಕದ ಪಾಪದ ಜೀವನದ ಅಂತ್ಯ) ಈ ಘಟನೆಗಳು ಒಂದಕ್ಕೊಂದು ಬೆಸೆದುಕೊಂಡಿವೆ. ನಮ್ಮನ್ನು ಸೃಷ್ಟಿಸಿದ ದೇವರು (ಯೋಹಾನ 1:1–3) ಅದೇ ದೇವರು ಮತ್ತೆ ಹಿಂತಿರುಗಿ ಬರುತ್ತಾನೆ ಆತನು ಕಡೆ ತುತೂರಿಯ ದ್ವನಿಯಾಗುವಾಗ ಒಂದು

ಕ್ಷಣದಲ್ಲೇ ರೆಪ್ಪೆ ಬಡಿಯುವಷ್ಟರೊಳಗಾಗಿ (1 ಕೊರಿಂಥ 15:52). ಇದು ನಮ್ಮ ಅಂತಿಮ ವಿಮೋಚನೆಯನ್ನು ತರುತ್ತದೆ. ನಮ್ಮ ಆರಂಭದಲ್ಲಿ ನಾವು ನಮ್ಮ ಅಂತ್ಯವನ್ನು ಕಾಣುತ್ತೇವೆ.

ಈ ವಾರದಲ್ಲಿ ಕೊನೆಯ ಮತ್ತು ಎಲ್ಲಾ ಅಂತಿಮ ಘಟನೆಗಳ ಕುರಿತಾಗಿ ಅಧ್ಯಯನ ಮಾಡೋಣ, ಈ ಲೋಕದ ವಿಚಾರದಲ್ಲಿ ಮತ್ತು ನಮ್ಮ ಕರ್ತನಾದ ಯೇಸುವಿನ ಬರೋಣದ ಕುರಿತಾಗಿ ಚರ್ಚಿಸೋಣ.

**ಈ ವಾರದ ಪಾಠವನ್ನು ಜೂನ್ 30 ರ ಸಬ್ಬತ್ತಿಗಾಗಿ ಅಧ್ಯಯನ ಮಾಡಿರಿ.**

**ಭಾನುವಾರ**

## ಕರ್ತನ ದಿನ

ಯೇಸುವಿನ ಎರಡನೇಯ ಬರೋಣದ ಕುರಿತಾಗಿ ನಾವು ಹೊಸ ಒಡಂಬಡಿಕೆಯ ಬೋಧನೆಯನ್ನು ಮಾತ್ರ ತೆಗೆದುಕೊಂಡರೆ ಅದು ಸಂಪೂರ್ಣವಾದ ಸತ್ಯವಾಗುವುದಿಲ್ಲ. ನಿಜವಾಗಿ ನೋಡುವುದಾದರೆ, ಕ್ರಿಸ್ತನ ಮೊದಲನೇಯ ಬರೋಣದ ನಂತರ ಆತನ ಜನನದ ನಂತರ, ಮರಣ, ಪುನರುತ್ಥಾನ, ಮತ್ತು ಆರೋಹಣದ ನಂತರ ಮಾತ್ರ ಆತನ ಎರಡನೇಯ ಬರೋಣದ ಸಂಪೂರ್ಣವಾದ ಚಿತ್ರಣವನ್ನು ನೀಡಲಾಯಿತು. ಆದರೆ,ಹೊಸ ಒಡಂಬಡಿಕೆಯು ನಮಗೆ ತಿಳಿಸುವ ಮುನ್ನ ಹಳೆಯ ಒಡಂಬಡಿಕೆಯು ಈ ಸತ್ಯದ ಛಾಯೆ ಮತ್ತು ಸೂಚನೆಗಳನ್ನು ನೀಡುತ್ತದೆ. ಯೇಸುವಿನ ಎರಡನೇಯ ಬರೋಣದ ಸಿದ್ಧಾಂತದಲ್ಲಿ ಹೊಸ ಒಡಂಬಡಿಕೆಯ ಬರಹಗಾರರು ಹೊಸ ವಿಚಾರಗಳನ್ನು ಬರೆಯುವುದಿಲ್ಲ. ಬದಲಿಗೆ, ಸತ್ಯವೇದದಲ್ಲಿ ತಿಳಿಸಲಾಗಿರುವ ಸತ್ಯವನ್ನು ಅವರು ಇನ್ನೂ ವಿಸ್ತಾರ ಮಾಡುತ್ತಾರೆ. ಈಗ ಶಿಲುಬೆಗೆ ಹಾಕಲ್ಪಟ್ಟ ಮತ್ತು ಪುನರುತ್ಥಾನನಾದ ರಕ್ಷಕನ ಎರಡನೇಯ ಬರೋಣದ ಕುರಿತಾಗಿ ಇನ್ನೂ ಹೆಚ್ಚಿನ ಸತ್ಯವನ್ನು ನಾವು ತಿಳಿದುಕೊಳ್ಳಲು ಮತ್ತು ಅದನ್ನು ಅಭಿನಂದಿಸಲು ಪ್ರಯತ್ನ ಪಡುತ್ತೇವೆ.

**ಈ ಮುಂದಿನ ವಚನಗಳನ್ನು ಓದಿರಿ. ಯೇಸುವಿನ ಎರಡನೇಯ ಬರೋಣದ ಕುರಿತಾಗಿ ಈ ವಚನಗಳು ಏನು ಹೇಳುತ್ತವೆ? ಯೆಶಾಯ 13:6,9; ಜೆಕರ್ಯ 14:9; ದಾನಿಯೇಲ 12:1.**

---

---

ಯಾವುದೇ ಪ್ರಶ್ನೆ ಯಿಲ್ಲದೆ . ಪಾಪದಲ್ಲಿರುವವರಿಗೆ ಮತ್ತು ನಾಶನದ ಮಾರ್ಗದಲ್ಲಿರುವವರಿಗೆ ಕರ್ತನ ದಿನವು ಒಂದು ದುಃಖದ ಮತ್ತು ಹಿಂಸೆಯ ದಿನವಾಗಿದೆ. ಆದರೆ, ಯಾರ ಹೆಸರು ಪುಸ್ತಕದಲ್ಲಿ ಕಾನಿಸುತ್ತದೋ ದೇವರ ಮಕ್ಕಳಿಗೆ ಅದೊಂದು ವಿಮೋಚನೆಯ ದಿನವಾಗಿದೆ.(ಫಿಲಿಪ್ಪಿ 4:3, ಪ್ರಕಟಣೆ 3:5, 13:8). ಕರ್ತನ ದಿನವು ಎಂಬ ಈ ತಿರುಳು ಈ ದುಷ್ಟರ ವಿರುದ್ದವಾಗಿ ನ್ಯಾಯತೀರ್ಪು ನೀಡುವ ಸಮಯವಾಗಿದೆ, ಆದರೆ ದೇವರ ನಂಬಿಕೆಯ ಮಕ್ಕಳಿಗೆ ಅದು ಸಂರಕ್ಷಣೆಯ ಮತ್ತು ಬಹುಮಾನ ನೀಡುವ ದಿನವಾಗಿದೆ ಎಂದು ಹಳೆಯ ಒಡಂಬಡಿಕೆಯು ತಿಳಿಸುತ್ತದೆ. ಉದಾಹರಣೆಗೆ, ಕೆಲವರು ಕರ್ತನ ಉಗ್ರತೆಯನ್ನು ಎದುರಿಸುತ್ತಾರೆ ಆದರೆ ದೇವರ ಕರೆಗೆ ಓಗೊಟ್ಟು ಆತನಿಗೆ ವಿಧೇಯರಾಗಿ ಉಳಿಯುವವರು ಆ ದಿನದಲ್ಲಿ ದೇವರ ಕೋಪದಿಂದ ರಕ್ಷಿಸಲ್ಪಡುವರು (ಚೆಫನ್ಯ 2:1–3).

**ಮತ್ತಾಯ 24:30,31. ಯೇಸುವಿನ ಎರಡನೇಯ ಬರೋಣದಲ್ಲಿ ಕಳೆದುಹೋದವರ ಮತ್ತು ರಕ್ಷಿಸಲ್ಪಟ್ಟವರ ನಡುವಿನ ವೈರುದ್ಯದ ವ್ಯತ್ಯಾಸವನ್ನು ಈ ವಚನಗಳು ಹೇಗೆ ತೋರಿಸುತ್ತವೆ?**

---

---

**ಕೊನೆಯ ಘಟನೆಗಳು ನಡೆಯುವ ಹಾಗೆ, ನಾವು ಯಾವ ಕಡೆಗೆ ಇದ್ದೇವೆ ಎಂಬುದು ಬಹಳ ಸ್ಪಷ್ಟವಾಗುತ್ತದೆ. ನಾವು ಯಾವ ರೀತಿಯ ಆಯ್ಕೆಗಳನ್ನು**

**ಮಾಡುತ್ತೇವೆ ಅದರ  ಮೇಲೆ ನಮ್ಮ ಕೊನೆಯ ಫಲಿತಾಂಶ ಆಧಾರವಾಗಿದೆ ಎಂಬುದನ್ನು ನಾವು ಹೇಗೆ ತಿಳಿಯುವುದು?**

**ಸೋಮವಾರ**

## ದಾನಿಯೇಲ ಮತ್ತು ಯೇಸುವಿನ ಎರಡನೇಯ ಬರೋಣ

ಯೇಸುವಿನ ಸಮಯದಲ್ಲಿ ಅನೇಕರು ಯೋಚಿಸಿದ ರೀತಿಯಲ್ಲಿ ಮೆಸ್ಸಿಯನು ರೋಮನ್ನರ ಸಾಮ್ರಾಜ್ಯವನ್ನು ನಾಶಮಾಡಿ ಇಸ್ರಾಯೇಲ್ಯರ ರಾಜ್ಯವನ್ನು ಶಾಶ್ವತವಾಗಿ ಸ್ಥಾಪಿಸುತ್ತಾನೆ ಎಂದು ನೀರಿಕ್ಷಿಸಿದರು, ಆದರೆ ಯೇಸುವಿನ ಎರಡು ಬರೋಣಗಳ ಉದ್ದೇಶವು ಅದಾಗಿರಲಿಲ್ಲ. ಬದಲಿಗೆ ದೇವರ ಮಕ್ಕಳಿಗೆ ಆತನು ಇನ್ನೂ ಹೆಚ್ಚಿನ ಬಹುಮಾನವನ್ನು ಅಂದರೆ ಬಿದ್ದುಹೋಗಿರುವ ಮತ್ತು ಹಾಳಾಗುವ ಈ ಲೋಕದಿಂದ ಬಿಡುಗಡೆಯನ್ನು ಸಿದ್ದಮಾಡಿದ್ದನು.

ಈ ಸತ್ಯವನ್ನು ದಾನಿಯೇಲ 2 ಅಧ್ಯಾಯದಲ್ಲಿ ತಿಳಿಸುವ ಹಾಗೆ ಬೇರೆ ಯಾವ ಸತ್ಯವೇದದ ಭಾಗವು ಕೂಡ ವಿವರಿಸುವುದಿಲ್ಲ. ಇದರ ಪ್ರಕಾರ ಲೋಕವು ಹಳೆಯದರ ಮೂಲಕ ಹೊಸದಾಗುವುದಿಲ್ಲ, ಬದಲಿಗೆ ಸಂಪೂರ್ಣವಾಗಿ ಹೊಸದಾದ ಸೃಷ್ಟಿಯಾಗುತ್ತದೆ.

ದಾನಿಯೇಲ 2 ಬಾಬೇಲ್, ಮೆದೋ ಪಾರಸಿಯ, ಗ್ರೀಕ್ ಮತ್ತು ಕೊನೆಯದಾಗಿ ರೋಮ್ ಇದು ಕೊನೆಯದಾಗಿ ಅಧುನಿಕ ಯುರೋಪ್ ದೇಶಗಳಾಗಿ ಹೇಗೆ ವಿಂಗಡಣೆ ಹೊಂದುತ್ತವೆ ಮತ್ತು  ಈ ರಾಜ್ಯಗಳು ಹೇಗೆ ಬಿದ್ದು ಹೋಗುತ್ತವೆ ಎಂಬುದನ್ನು ತೋರಿಸುತ್ತದೆ. ನೆಬುಚದ್ನೆಜ್ಜರನು ಕನಸಿನಲ್ಲಿ ಕಂಡ ವಿಗ್ರಹವು (ಲೋಕದ ನಾಲ್ಕು ಮುಖ್ಯ ರಾಜ್ಯಗಳು ಹೇಗೆ ಅಧಿಕಾರಕ್ಕೆ ಬರುತ್ತವೆ) ಲೋಕದ ಈ ರಾಜ್ಯಗಳು ಹೇಗೆ ಅಂತ್ಯವಾಗುತ್ತವೆ ಮತ್ತು ಪರಲೋಕದ ರಾಜ್ಯವು ಹೇಗೆ ಶಾಶ್ವತವಾಗಿ ನಿಲ್ಲುತ್ತವೆ ಎಂಬುದನ್ನು ತೋರಿಸುತ್ತದೆ.

**ದಾನಿಯೇಲ 2:34,35, 44, 45. ಈ ಲೋಕದ ಅಂತ್ಯದ ಕುರಿತಾಗಿ ಈ ವಚನಗಳು ಏನು ಹೇಳುತ್ತವೆ ಮತ್ತು ಬರಲಿರುವ ಹೊಸ ರಾಜ್ಯದ ಕುರಿತಾಗಿ ಏನು ಹೇಳುತ್ತವೆ?**

ಯೇಸುವು ತಿರುಗಿ ಬರುವಾಗ ಏನು ನಡೆಯುತ್ತದೆ ಎಂಬುದರ ಕುರಿತಾಗಿ ಸ್ವಲ್ಪ ಆಸಕ್ತಿಯನ್ನು ತೋರಿಸುತ್ತದೆ. ಲೂಕ 20:17,18 ರಲ್ಲಿ ಯೇಸುವು, ಲೋಕವನ್ನು ಸಂಪೂರ್ಣವಾಗಿ ನಾಶಮಾಡಿದ ಈ ಬಂಡೆ ಜೊತೆಯಲ್ಲಿ ಗುರುತಿಸಿಕೊಳ್ಳುತ್ತಾನೆ, ದಾನಿಯೇಲ 2:35 ರಲ್ಲಿರುವ ಅರಾಮಿಕ್ ಭಾಷೆಯಲ್ಲಿ ಚಿನ್ನ, ಬೆಳ್ಳಿ, ಮಣ್ಣು, ಮತ್ತು ಕಬ್ಬಿಣ ಮತ್ತು ತಾಮ್ರ ಎಲ್ಲವೂ ಕೂಡ ಜಜ್ಜಲ್ಪಟ್ಟವು ಅವು ಬೇಸಿಗೆಯ ಹೊಟ್ಟಿನ ಹಾಗೆ ಆದವು; ಮತ್ತು ಗಾಳಿಯು ಅದನ್ನು ಹಾರಿಸಿಕೊಂಡು ಹೋಯಿತು, ಅವು ಎಲ್ಲಿಯೂ ಕಾಣಿಸಲಿಲ್ಲ ಎಂಬುದಾಗಿ ತಿಳಿಸುತ್ತದೆ ಅಂದರೆ ಯೇಸುವು ಬಂದ ನಂತರ ಏನೇನೂ ಕೂಡ ಉಳಿಯುವುದಿಲ್ಲ.

ಅದೇ ಸಮಯದಲ್ಲಿ, ಹಳೆಯ ಲೋಕವನ್ನು ನಾಶ ಮಾಡಿದ ಆ ಬಂಡೆಯು ದೊಡ್ಡ ಪರ್ವತವಾಗಿ ಲೋಕವನ್ನೆಲ್ಲಾ ವ್ಯಾಪಿಸಿತು. ಎರಡನೇಯ ಬರೋಣದ ನಂತರದ ಈ ರಾಜ್ಯವು ಎಂದಿಗೂ ಅಳಿದು ಹೋಗುವುದಿಲ್ಲ ಮತ್ತು ಅದು ಶಾಶ್ವತವಾಗಿ ನಿಲ್ಲುತ್ತದೆ. (ದಾನಿಯೇಲ 2:44).

ಈ ಲೋಕದ ಮೇಲೆ ಜೀವಿಸಿದ ಜನರಿಗೆ ಎರಡರಲ್ಲಿ ಒಂದು ಅಂತ್ಯ ಮಾತ್ರ ಸಿಗುತ್ತದೆ. ಒಂದು ನಾವು ಯೇಸುವಿನ ಜೊತೆಯಲ್ಲಿ ಪರಲೋಕದಲ್ಲಿ ಇರುತ್ತೇವೆ ಅಥವಾ ನಾವು ಏನೂ ಕಾಣದ ಹೊಟ್ಟಿನ ಹಾಗೆ ಮಾಯವಾಗುತ್ತೇವೆ. ಒಂದಲ್ಲ ಒಂದು ರೀತಿಯಲ್ಲಿ ನಿತ್ಯತ್ವ ನಮಗಾಗಿ ಎದುರುನೋಡುತ್ತದೆ.

**ಮಂಗಳವಾರ**

## ದೀರ್ಘಕಾಲದ ಯೋಜನೆಗಳು

**ತೀತನಿಗೆ 2:13 ನ್ನು ಓದಿರಿ. ಈ ನಮಗೆ ಯಾವ ಮಹಾ ನಿರೀಕ್ಷೆಯಿದೆ ಮತ್ತು ಯಾಕೆ?**

ನಮ್ಮ ವಿಶ್ವದ ಉಗಮದ ಕುರಿತಾಗಿ ವಿವರಣೆ ನೀಡುತ್ತಾ ಒಬ್ಬ ಅಧ್ಯಾಪಕರು ತಮ್ಮ ತರಗತಿಯಲ್ಲಿ ಹೀಗೆ ಹೇಳುತ್ತಿದ್ದರು ಒಂದು ಸಣ್ಣ ಅಣುವು ಎಲ್ಲಿಂದಲೂ ಬಂದು ದೊಡ್ಡದಾಗಿ ಬೆಳೆಯುತ್ತಾ ಅದು ಹೊಡೆದುಹೋಗಿ ಆದರ ಒಳಗಿನಿಂದ ಈ ವಿಶ್ವವು ಅಸ್ತಿತ್ವಕ್ಕೆ ಬಂದಿತು ಎಂದು ವಿವರಿಸಿದರು. ಆ ಒಂದು ಸಣ್ಣ ಅಣುವು ಎಲ್ಲಿಂದ ಬಂದಿತು ಎಂದು ಅವರಿಗೆ ಗೊತ್ತಿಲ್ಲ ಆದರೆ ಅದು ಬಂದಿದ್ದನ್ನು ಅವರು ನಂಬಿಕೆಯಿಂದ ನಂಬಿದರು.

ಈಗ ನಾವು ಈ ವಾರದ ಮುನ್ನುಡಿಯನ್ನು ನೋಡಿದೆವು, ನಮ್ಮ ಆರಂಭದಲ್ಲಿಯೇ ನಮ್ಮ ಅಂತ್ಯ ಎಂಬುದಾಗಿ ನೋಡಿದೆವು. ಇದಕ್ಕಾಗಿಯೇ ಈ ಅಧ್ಯಾಪಕರ ಪ್ರಕಾರ ನಮ್ಮ ಅಂತ್ಯವು ಅಷ್ಟು ನಿರೀಕ್ಷೆಯನ್ನು ತರುವುದಿಲ್ಲ, ಅದರಲ್ಲೂ ಕೊನೆಯವರೆಗೂ ಕೂಡ, ಈ ವಿಶ್ವವು ಒಂದು ಸಣ್ಣ ಅಣುವಿನಿಂದ ಬಂದಿದ್ದರೂ ಕೂಡ ಅದು ಅಂತ್ಯಕ್ಕೆ ಸಿದ್ದವಾಗಿದೆ, ಇದರಲ್ಲಿ ಮಾನವರು ಕೂಡ ಸೇರಿದ್ದಾರೆ.

ಇದಕ್ಕೆ ವಿರುದ್ದವಾಗಿ, ಸತ್ಯವೇದದ ನಮ್ಮ ಆರಂಭವು ಹೆಚ್ಚು ತಾರ್ಕಿಕವಾಗಿರುವುದಲ್ಲದೆ ಅದು ಹೆಚ್ಚು ನಿರೀಕ್ಷೆಯನ್ನು ನೀಡುತ್ತದೆ. ಎಲ್ಲದಕ್ಕೂ ಮೂಲನಾಗಿರುವ ದೇವರಿಗೆ ಸ್ತೋತ್ರ, ನಮ್ಮ ಧೀರ್ಘಕಾಲದ ಯೋಜನೆಗಳು ಒಳ್ಳೆಯದಾಗಿವೆ. ನಾವು ಭವಿಷ್ಯದಲ್ಲಿ ನಿರೀಕ್ಷೆಯನ್ನು ಇಟ್ಟುಕೊಳ್ಳಬಹುದು, ಮತ್ತು ಈ ನಿರೀಕ್ಷೆಯು ಯೇಸುವಿನ ಎರಡನೇಯ ಬರೋಣದ ಮೇಲೆ ಆಧಾರವಾಗಿದೆ.

2 ತಿಮೋಥಿ 4:6–8 ನ್ನು ಓದಿರಿ. ಪೌಲನು ಇಲ್ಲಿ ಏನು ಹೇಳುತ್ತಾನೆ, ಆತನು ತನ್ನ ನಿರೀಕ್ಷೆಯನ್ನು ಯಾವುದರಲ್ಲಿ ಇಡುತ್ತಿದ್ದಾನೆ.?

ಪೌಲನು ಅತೀ ಶೀಘ್ರದಲ್ಲಿಯೇ ಹತನಾಗುವುದಕ್ಕೆ ಸಿದ್ದವಾಗಿದ್ದರೂ ಕೂಡ ಆತನು ಯೇಸುವಿನ ಬರೋಣದ ನಿರೀಕ್ಷೆಯಲ್ಲಿ ಮತ್ತು ರಕ್ಷಣೆಯ ಭರವಸೆಯಲ್ಲಿ

ಜೀವಿಸುತ್ತಿದ್ದಾನೆ. ಪೌಲನು ಹೇಳುವ ಆತನ ಪ್ರತ್ಯಕ್ಷತೆ (2 ತಿಮೋಥಿ 4:8). ನೀತಿಯ ಕಿರೀಟವು ಆತನಿಗಾಗಿ ಕಾದಿದೆ, ನಿಜವಾಗಿಯೂ ಅದು ಆತನ ಸ್ವಂತ ನೀತಿಯಲ್ಲ (1 ತಿಮೋಥಿ 1:15) ಬದಲಿಗೆ, ಯೇಸುವಿನ ನೀತಿಯಾಗಿದೆ. ಇದರ ಮೇಲೆ ಪೌಲನು ಕ್ರಿಸ್ತನ ಎರಡನೇಯ ಬರೋಣದ ವಾಗ್ದಾನವನ್ನು ನಿರೀಕ್ಷಿಸುತ್ತಾನೆ. ಅವನ ಆ ಸಮಯದ ಸನ್ನಿವೇಶದ ಹೊರೆತಾಗಿಯೂ ಕೂಡ ಅವುಗಳು ಆತನಿಗೆ ಬಹಳ ಕಷ್ಟವಾಗಿದ್ದರೂ ಕೂಡ (ಹತನಾಗುವುದಕ್ಕೆ ಸಿದ್ದನಾಗಿದ್ದನು), ಪೌಲನು ತನ್ನ ಧೀರ್ಘಕಾಲದ ಯೋಜನೆಗಳು ಚೆನ್ನಾಗಿವೆ ಎಂಬುದನ್ನು ತಿಳಿದಿದ್ದನು. ಯಾಕೆಂದರೆ ಅವನು ದೊಡ್ಡ ಚಿತ್ರಣವನ್ನು ನೋಡುತ್ತಿದ್ದನು, ಅವನು ಆ ಸಮಯದ ಚಿತ್ರಣವನ್ನು ನೋಡಲಿಲ್ಲ.

**ಈಗಿನ ನಿಮ್ಮ ಸನ್ನಿವೇಶದ ಹೊರತಾಗಿಯೂ ಕೂಡ, ಪೌಲನು ಹೊಂದಿದ್ದ ಆ ನಿರೀಕ್ಷೆಯನ್ನು ನೀವು ಹೇಗೆ ಹೊಂದುವಿರಿ? ಈ ಚಿತ್ರಣದ ಮೂಲಕ ನಾವು ಯಾವ ರೀತಿಯ ನಿರೀಕ್ಷೆಯನ್ನು ಹೊಂದಬಹುದು?**

**ಬುಧವಾರ**

## ಆಕಾಶದ ಮೇಘಗಳಲ್ಲಿ

ಸತ್ಯವೇದದ ಪ್ರಕಾರ ಎರಡನೇಯ ಬರೋಣವು ಎಷ್ಟೇ ಮುಖ್ಯವಾದ ಮತ್ತು ಪ್ರಮುಖವಾಗಿದ್ದರೂ ಕೂಡ, ಎಲ್ಲಾ ಕ್ರೈಸ್ತವರೂ ಇದನ್ನು ಅಕ್ಷರಶಃ, ಕ್ರಿಸ್ತನ ಪ್ರತ್ಯಕ್ಷತೆಯು ನಿಜವಾದದ್ದು ಎಂದು ನಂಬುವುದಿಲ್ಲ. ಕೆಲವರು ವಾದಿಸುವ ಪ್ರಕಾರ, ಯೇಸುವಿನ ಎರಡನೇಯ ಬರೋಣವು ನಿಜವಾಗಲೂ ಕ್ರಿಸ್ತನ ಬರೋಣವಾಗಿರುವುದಿಲ್ಲ ಬದಲಿಗೆ ಆತನ ಆತ್ಮವು ಸಭೆಗಳಲ್ಲಿ ಕಾಣಿಸುತ್ತದೆ. ಮತ್ತೊಂದು ವಿಧದಲ್ಲಿ ಕ್ರಿಸ್ತನ ಗುಣಲಕ್ಷಣಗಳು ಆತನ ಜನರಲ್ಲಿ ಕಾಣುವಾಗ ಯೇಸುವು ಈ ಲೋಕಕ್ಕೆ ಬಂದ ಹಾಗೆ ಎಂದು ಕೆಲವರು ಭಾವಿಸುತ್ತಾರೆ.

ಆದರೆ ಇಂತಹ ಬೋಧನೆಯು ಸುಳ್ಳು ಎಂದು ತಿಳಿಯುವುದು ಎಷ್ಟು ಪ್ರಾಮುಖ್ಯವಾದದ್ದು, ಒಂದು ವೇಳೆ ಅದು ನಿಜವಾದರೆ ಅದನ್ನು ನೋಡಲು ನಾವು ಎಷ್ಟು ಕಾಲ ಎದುರುನೋಡಬೇಕಾಗಬಹುದು?

ಎರಡನೇಯ ಬರೋಣದ ಕುರಿತಾದ ಈ ಹೊಸ ಒಡಂಬಡಿಕೆಯ ವಚನಗಳನ್ನು ಓದಿರಿ. ಕ್ರಿಸ್ತನ ಬರೋಣದ ಸ್ವಭಾವದ ಕುರಿತಾಗಿ ಅವು ಏನು ಹೇಳುತ್ತವೆ?

**ಮತ್ತಾಯ 24:30** ________________________________

**1 ಥೆಸಲೋನಿಕ 4:16** ________________________________

**ಮತ್ತಾಯ 26:64** ________________________________

**ಪ್ರಕಟಣೆ 1:7** ________________________________

**2 ಥೆಸಲೋನಿಕ 1:7–10** ________________________________

"ಆಕಾಶವು ತೆರೆದು ಮತ್ತು ಮುಚ್ಚುವ ಹಾಗೆ ಕಾಣಿಸುತ್ತದೆ. ದೇವರ ಸಿಂಹಾಸನದಿಂದ ಮಹಿಮೆಯು ಪ್ರಕಾಶಿಸುವಂತೆ ಕಾಣುತ್ತದೆ. ಬೆಟ್ಟಗಳು ಗಾಳಿಗೆ ಹೊಡೆದುಕೊಂಡು ಹೋಗುತ್ತವೆ, ಮತ್ತು ಗುಡ್ಡಗಳು ಎಲ್ಲಾ ಕಡೆಗೂ ಹಾರಿಹೋಗುತ್ತವೆ. ಬಿರುಗಾಳಿಯು ಬೀಸುವ ಸದ್ದು ಕೇಳಿಸುತ್ತದೆ. ಸಮುದ್ರವು ಕೋಪದಿಂದ ಮುನ್ನುಗ್ಗುತ್ತದೆ. ದೆವ್ವಗಳ ಶಬ್ದದಂತೆ ಸಮುದ್ರದ ಅಲೆಗಳು ಸದ್ದುಮಾಡುತ್ತವೆ. ಭೂಲೋಕವೆಲ್ಲಾ ಸಮುದ್ರದ ಅಲೆಗಳಿಂದ ತುಂಬುತ್ತದೆ. ಅದರ ಅಸ್ಥಿವಾರಗಳು ಕದಲುತ್ತವೆ. ಪರ್ವತ ಸಾಲುಗಳು ಅಲ್ಲಾಡುತ್ತವೆ. ದ್ವೀಪಗಳು ಅಳಿಸಿಹೋಗುತ್ತವೆ. ಸಮುದ್ರ ತೀರಗಳು ಕೋಪದಿಂದ ಎದ್ದು ಬರುವ ಅಲೆಗಳಿಗೆ ತಮ್ಮ ರೂಪವನ್ನು ಕಳೆದುಕೊಳ್ಳುತ್ತವೆ. ಬಾಬೇಲ್ ದೇವರ ಜ್ಞಾಪಕಕ್ಕೆ ಬರುತ್ತದೆ. ದೇವರ ಕೋಪಾಗ್ನಿಯ ದ್ರಾಕ್ಷಾರಸವನ್ನು ಕುಡಿಯಲು ಅದು ಸಿದ್ಧವಾಗಿದೆ". **ಎಲೆನ್ ಜಿ ವೈಟ್ ಮಹಾ ಹೋರಾಟ ಪುಟ 637.**

ಯೇಸುವಿನ ಎರಡನೇಯ ಬರೋಣವು ಒಂದು ಮಹಾ ದೊಡ್ಡ ಘಟನೆಯಾಗಿದ್ದು ಇಡೀ ಲೋಕವೇ ಇದನ್ನು ಗ್ರಹಿಸುವುದಾಗಿದೆ. ಅದು ಯಾವಾಗ ನಡೆಯುತ್ತದೆ ಎಂದು ಎಲ್ಲರಿಗೂ ಗೊತ್ತು. ಯೇಸುವು ತನ್ನ ಮೊದಲನೇಯ

ಬರೋಣದಲ್ಲಿ ನಮಗಾಗಿ ಮಾಡಿದ ರಕ್ಷಣೆಯ ಕಾರ್ಯವನ್ನು ಪೂರ್ಣಗೊಳಿಸಲು ಆತನು ಎರಡನೇಯ ಬಾರಿ ಬರುವವನಾಗಿದ್ದಾನೆ.

**ಕ್ರಿಸ್ತನ ಬರೋಣದ ಸತ್ಯವು ನಾವು ಈಗ ಹೇಗೆ ಜೀವಿಸುತ್ತಿದ್ದೇವೆ ಎಂಬುದರ ಕುರಿತಾಗಿ ನಮ್ಮನ್ನು ಯಾವ ರೀತಿಯ ಆತ್ಮವಿಮರ್ಶೆಗೆ ನಡೆಸುತ್ತದೆ? ಇದು ನಮ್ಮ ಜೀವನದಲ್ಲಿ ಯಾವುದು ಬಹಳ ಮುಖ್ಯ ಎಂಬುದರ ಕುರಿತಾಗಿ ಆಲೋಚಿಸುವುದಕ್ಕೆ ಹೇಗೆ ಸಹಾಯ ಮಾಡುತ್ತದೆ?**

**ಗುರುವಾರ**

## ಬದುಕುಳಿದವರು ಮತ್ತು ಸತ್ತವರು

ತನ್ನ ಸ್ನೇಹಿತನಾದ ಲಾಜರನನ್ನು ಸಮಾಧಿಯಿಂದ ಎಬ್ಬಿಸುವ ಮುನ್ನ ಯೇಸುವು ಈ ಮಾತುಗಳನ್ನು ಹೇಳಿದನು: ನಾನೇ ಪುನರುತ್ಥಾನವೂ ಜೀವವೂ ಆಗಿದ್ದೇನೆ; ನನ್ನನ್ನು ನಂಬುವವನು ಸತ್ತರೂ ಬದುಕುವನು (ಯೋಹಾನ 11:25). ಇಂತಹ ಅದ್ಭುತವಾದ ಹಕ್ಕನ್ನು ಪ್ರತಿಪಾದಿಸುವಾಗ ಜನರು ಅದನ್ನು ನಂಬಬೇಕು, ಇದನ್ನು ರುಜುಪಡಿಸಲು ಯೇಸುವು ಲಾಜರನನ್ನು ಎಬ್ಬಿಸಿದನು. ಅವನು ಸತ್ತು ಅವನ ದೇಹವು ಕೊಳೆಯುವ ಸ್ಥಿತಿಗೆ ತಲುಪಿತ್ತು. (ಯೋಹಾನ 11:39).

ಯೇಸುವಿನಲ್ಲಿ ನಂಬಿಕೆ ಇಟ್ಟವರು ಸತ್ತರೂ ಕೂಡ ಯೇಸುವು ಹೇಳಿದ ಹಾಗೆ ಎದ್ದುಬರುವರು. ಒಂದು ವೇಳೆ ಅವರು ಸತ್ತರೂ ಕೂಡ ಅವರು ಮತ್ತೆ ಬದುಕುವರು. ಸತ್ತವರ ಪುನರುತ್ಥಾನ ಎಂದರೆ ಇದೆ. ಈ ಸತ್ಯವೂ ಯೇಸುವಿನ ಎರಡನೇಯ ಬರೋಣವನ್ನು ನಮ್ಮ ಎಲ್ಲಾ ನಿರೀಕ್ಷೆಗಳ ಕೇಂದ್ರಬಿಂದುವಾಗುವಂತೆ ಮಾಡುತ್ತದೆ.

ಈ ವಚನಗಳ ಪ್ರಕಾರ, ಯೇಸುವು ತಿರುಗಿ ಬಂದಾಗ ಸತ್ತವರ ಸ್ಥಿತಿಯು ಏನಾಗುತ್ತದೆ? ರೋಮ 6:5; 1 ಥೆಸಲೋನಿಕ 4:16; 1 ಕೊರಿಂಥ 15:42–44, 53–55.

ಯೇಸುವಿನ ಎರಡನೇಯ ಬರೋಣದ ಬಹಳ ಮುಖ್ಯವಾದ ಘಟನೆಯೆಂದರೆ ಯೇಸುವು ಯಾವ ರೀತಿಯಲ್ಲಿ ಮರಣದಿಂದ ಜೀವಿತನಾಗಿ ಎದ್ದು ಬಂದಿದ್ದಾನೋ ಅದೇ ರೀತಿಯಲ್ಲಿ ಎಲ್ಲಾ ಕಾಲದಲ್ಲಿ ಜೀವಿಸಿದ ಆತನ ಹಿಂಬಾಲಕರು ಕೂಡ ಮರಣದಿಂದ ಎದ್ದು ಬರುವರು . ಆತನ ಪುನರುತ್ಥಾನದಲ್ಲಿ ಅವರ ನಿರೀಕ್ಷೆ ಮತ್ತು ಆಶ್ವಾಸನೆಗಳು ಅಡಗಿವೆ.

**ಯೇಸುವು ತಿರುಗಿ ಬರುವಾಗ ಬದುಕಿ ಉಳಿದವರ ಸ್ಥಿತಿಯು ಏನಾಗುತ್ತದೆ? ಫಿಲಿಪ್ಪಿ 3:21, 1 ಥೆಸಲೋನಿಕ 4:17.**

ಯೇಸುವು ಬರೋಣದಲ್ಲಿ ಬದುಕಿರುವ ನಂಬಿಗಸ್ತರು ತಮ್ಮ ಶರೀರಗಳನ್ನು ತಿರುಗಿ ಪಡೆಯುತ್ತಾರೆ  ಆದರೆ ಈಗ ಇರುವ ಸ್ಥಿತಿಯಲ್ಲಿ ಅಲ್ಲ. ಅದು ರೂಪಾಂತರಗೊಂಡಿರುವ ಕ್ರಿಸ್ತನ ಶರೀರದ ಹಾಗೆ ಮಹಿಮೆಯ ಶರಿರವಾಗಿರುತ್ತದೆ. ಬದುಕಿರುವ ನೀತಿವಂತರು ಒಂದು ಕ್ಷಣದಲ್ಲೇ ರೆಪ್ಪೆ ಬಡಿಯುವಷ್ಟರೊಳಗಾಗಿ ಬದಲಾಗುವರು ದೇವರ ಸ್ವರದಿಂದ ಅವರು ಮಹಿಮೆಯ ಶರೀರವನ್ನು ಹೊಂದುವರು; ಅವರು ಈಗ ಅಮರತ್ವವನ್ನು ಧರಿಸುವರು ಮತ್ತು ದೇವರನ್ನು ಆಕಾಶದ ಮಧ್ಯದಲ್ಲಿ ಎದುರುಗೊಳ್ಳುವರು. **ಎಲೆನ್ ಜಿ ವೈಟ್ ಮಹಾ ಹೋರಾಟ ಪುಟ 645.**

**ಒಂದು ವೇಳೆ ನಿಮ್ಮ ಜೀವನದಲ್ಲಿ ಬಹಳ ಪ್ರಾಮುಖ್ಯವಾದ ವಿಷಯಗಳಿಗೆ ಬದಲಾಗಿ ನಿತ್ಯ ಜೀವವನ್ನು ತ್ಯಾಗಮಾಡಬೇಕಾದರೆ ನೀವು ಆಯ್ಕೆಮಾಡಿಕೊಳ್ಳುವ ವಿಷಯಗಳನ್ನು ಪಟ್ಟಿ ಮಾಡಿರಿ, ನಿಮ್ಮ ಪಟ್ಟಿಯಲ್ಲಿ ಯಾವ ವಿಷಯಗಳು ಮುಖ್ಯವಾಗಿವೆ ಎಂದು ಗಮನಿಸಿರಿ?**

## ಶುಕ್ರವಾರ

**ಮುಂದಿನ ಆಲೋಚನೆ :** ಯೇಸುವಿನ ಎರಡನೇಯ ಬರೋಣವು ಒಂದು ಮುಗಿಯಲಾರದ ಸಂಚಿಕೆಯಲ್ಲ.ಅನುಬಂಧವಲ್ಲ ಅಥವಾ ಮಾನವನ ಪಾಪ ಮತ್ತು ಕಷ್ಟಗಳಿಂದ ಬಿದ್ದು ಹೋಗಿರುವ ಈ ಲೋಕದಲ್ಲಿ ಸಂಭವಿಸುವ ಕೆಟ್ಟ ಕಥೆಯಲ್ಲ. ಬದಲಿಗೆ, ಎರಡನೇಯ ಬರೋಣವು ಮಹಾ ಅದ್ಭುತವಾದ ಅಂತ್ಯವಾಗಿದೆ, ಕ್ರೈಸ್ತ ಲೋಕದ ಮಹಾ ನಿರೀಕ್ಷೆಯಾಗಿದೆ. ಇದನ್ನು ಬಿಟ್ಟರೆ, ಇನ್ನಾವುದರಲ್ಲಿ ನಮ್ಮ ನಿರೀಕ್ಷೆಯಿದೆ?ಮಾನವನ ಕಥೆಯು ಮುಂದಕ್ಕೆ ಸಾಗುತ್ತಲೇ ಇರುತ್ತದೆ, ಒಂದು ದುರಂತದಿಂದ ಮತ್ತೊಂದು ದುರಂತ, ಒಂದು ಅಪಘಾತದ ನಂತರ ಮತ್ತೊಂದು ಅಪಘಾತ ಮರಣವು ಸಂಭವಿಸುವ ತನಕ ಇದು ನಡೆಯುತ್ತಾ ಇರುತ್ತದೆ. ಕ್ರಿಸ್ತನು ತನ್ನ ಬರೋಣದಲ್ಲಿ ತೋರಿಸುವ ನಿರೀಕ್ಷೆಯ ಹೊರೆತಾಗಿಯು ವಿಲಿಯಂ ಶೇಕ್ಸ್ ಪಿಯರ್ ಹೇಳುವ ಹಾಗೆ ಒಬ್ಬ ಮೂರ್ಖನು ಹೇಳಿದ ಕಟ್ಟು ಕಥೆ ಅದರಲ್ಲಿ ಧ್ವನಿ ಮತ್ತು ಶಬ್ದ ತುಂಬಿದೆ, ಮಹತ್ವವಿಲ್ಲದ ಕಥೆಯಾಗಿದೆ. ಆದರೂ ಕೂಡ, ನಮಗೆ ಈ ನಿರೀಕ್ಷೆಯಿದೆ ಯಾಕೆಂದರೆ ದೇವರ ವಾಕ್ಯವು ಇದನ್ನು ಮತ್ತೆ ಮತ್ತೆ ನಮಗಾಗಿ ಧೃಢಪಡಿಸುತ್ತದೆ.ನಮಗೆ ಈ ನಿರೀಕ್ಷೆಯು ಕ್ರಿಸ್ತನು ನಮಗಾಗಿ ತನ್ನ ಪ್ರಾಣವನ್ನು ನಮ್ಮನ್ನು ಬಿಡಿಸಿಕೊಳ್ಳುವುದಕ್ಕಾಗಿ ಇಟ್ಟಿದ್ದರಲ್ಲಿ ಭದ್ರವಾಗಿದೆ. (ಮಾರ್ಕ 10:45), ಮತ್ತು ಯೇಸುವು ನಮಗಾಗಿ ತಿರುಗಿ ಬರುತ್ತಿದ್ದಾನೆ. ಮರದಲ್ಲಿ ಹಾರುವ ಹಕ್ಕಿಗಳು ಇದನ್ನು ಹೇಳುವುದಿಲ್ಲ, ಆದರೆ ಅವು ತಮ್ಮಲ್ಲಿಯೇ ತಾವು ಒಂದು ನಿರೀಕ್ಷೆಯನ್ನು ಮತ್ತು ಭರವಸೆಯನ್ನು ಸಾರುತ್ತವೆ. ಆದರೆ ಅವು ಒಂದು ದಿನ ಯೇಸುವು ತಿರುಗಿ ಬರುವಾಗ ಆದರೆ ಕಡೇ ತೂತುರಿಯ ಧ್ವನಿಯಾಗುವಾಗ ನಾವೆಲ್ಲರೂ ಒಂದು ಕ್ಷಣದಲ್ಲೇ ರೆಪ್ಪೆ ಬಡಿಯುವಷ್ಟರೊಳಗಾಗಿ ಮಾರ್ಪಡುವೆವು. ಒಂದು ದಿನ ನಾವು ಮೇಲಕ್ಕೆ ನೋಡುವಾಗ ಮನುಷ್ಯ ಕುಮಾರನು ಸರ್ವಶಕ್ತನ ಬಲಗಡೆಯಲ್ಲಿ ಆಸೀನನಾಗಿರುವುದನ್ನೂ ಆಕಾಶದ ಮೇಘಗಳೊಂದಿಗೆ ಬರುವುದನ್ನೂ ನೋಡುವಿರಿ (ಮಾರ್ಕ 14:62) ಎಂದು ಹಕ್ಕಿಗಳು ನಮಗೆ ಹೇಳುವುದಿಲ್ಲ,

ಯಾಕೆಂದರೆ ಇವುಗಳನ್ನು ದೇವರ ವಾಕ್ಯವು ನಮಗೆ ಹೇಳುತ್ತದೆ, ನಮಗೆ ವಾಗ್ದಾನ ಮಾಡುತ್ತದೆ ಮತ್ತು ನಾವು ಅದನ್ನು ನಂಬುತ್ತೇವೆ.

## ಚರ್ಚಿಸಬೇಕಾದ ಪ್ರಶ್ನೆಗಳು

1. ಕೆಲವರು ನಂಬುವ ಹಾಗೆ ಯೇಸುವಿನ ಎರಡನೇಯ ಬರೋಣವು ಕೇವಲ ಒಂದು ಘಟನೆಯಾದರೆ ಹೇಗಿರಬಹುದು ಎಂದು ಆಲೋಚಿಸಿರಿ; ಇದು ಕ್ರಿಸ್ತನ ಹಿಂಬಾಲಕರ ಜೀವನದಲ್ಲಿ ಯಾವ ರೀತಿಯ ಬದಲಾವಣೆಯನ್ನು ತರುತ್ತದೆ. ಇದರ ನಡುವೆಯೂ ಕೂಡ ನಾವು ಹೇಗೆ ನಿರೀಕ್ಷೆಯಿಲ್ಲದವರಾಗಿ  ಹೇಗೆ ಬದುಕುವುದು?

2. ವಿಶ್ವವು ಏನೂ ಇಲ್ಲದಿರುವ ಒಂದು ಅಣುವಿನಿಂದ ಉಂಟಾಯಿತು ಎನ್ನುವುದು ಯಾಕೆ ಹಾಸ್ಯಾಸ್ಪದವಾದ ವಾದವಾಗಿದೆ?ಇಂತಹ ವಾದವನ್ನು ಜನರು ಯಾಕೆ ಪ್ರೋ

3. ಯೇಸುವಿನ ಬರೋಣದ ನಿರೀಕ್ಷೆಗೆ ಬದಲಾಗಿ ಈ ಲೋಕದಲ್ಲಿ ನಿಮಗೆ ಇರುವ ಪ್ರಮುಖವಾದ ವಿಷಯಗಳ ಪಟ್ಟಿಯನ್ನು ನಿಮ್ಮ ತರಗತಿಯ ಜೊತೆಗೆ ಹಂಚಿಕೊಳ್ಳಿರಿ. ಬೇರೆಯವರ ಪಟ್ಟಿಯಿಂದ ನೀವು ಏನು ಕಲಿಯಬಹುದು? ಒಂದು ವೇಳೆ ಯಾರ ಪಟ್ಟಿಯಲ್ಲಾದರೂ ಏನೂ ಇಲ್ಲದೆ ಹೋದರೆ ರಕ್ಷಣೆಗೆ ಮಿಗಿಲಾಗಿ ನಮ್ಮ ಜೀವನದಲ್ಲಿ ಯಾವುದೂ ಕೂಡ ಮುಖ್ಯವಲ್ಲ ಎಂಬುದನ್ನು  ನೀವು ಹೇಗೆ ಗ್ರಹಿಸುವಿರಿ?